ಕರ್ನಾಟಕ ವಿಧಾನ ಸಭಾ ಸದಸ್ಯರಾದ ಶ್ರೀ.ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) ರವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ :5736 ಕ್ಕೆ ಅನುಬಂಧ

ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಮಾಣ ಮಾಡಿದ ಕೊಠಡಿಗಳ ತಾಲ್ಲೂಕುವಾರು ವಿವರ :

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಕಳೆದ ಎರಡು ವರ್ಷಗಳಲ್ಲಿ ನಿರ್ಮಾಣಗೊಂಡ ಕೊಠಡಿಗಳ ಸಂಖ್ಯೆ		
		2003–04	2004–05	ಒಟ್ಟು
01	ಬಂಟ್ವಾಳ	24	44	68
02	ಬೆಳ್ತಂಗಡಿ	18	31	49
03	ಮಂಗಳೂರು ನಗರ	04	08	12
04	ಮಂಗಳೂರು ತಾಲ್ಲೂಕು	12	43	55
05	ಮೂಡುಬಿದ್ರೆ	07	14	21
06	ಪುತ್ತೂರು	11	28	39
07	ಸೂಳ್ಯ	07	21	28
	ಒಟ್ಟು	**83**	**186**	**279**

5057 (5997) ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಶೈಕ್ಷಣಿಕ ಸಾಲಿನಲ್ಲಿ ಹೊಸ ಪಾಲಿಟೆಕ್ನಿಕ್ ಶಿಕ್ಷಣಾಲಯಗಳನ್ನು ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದ್ದಲ್ಲಿ, ವಿವರಗಳೇನು;

ಆ) ಹಿಂದುಳಿದ ಹಾಗೂ ಗ್ರಾಮಾಂತರ ಪ್ರದೇಶಗಳಿಂದ ಕೂಡಿದ ಬೆಳ್ತಂಗಡಿ ತಾಲ್ಲೂಕಿಗೆ ಸರ್ಕಾರಿ ಪಾಲಿಟೆಕ್ನಿಕ್ ಶಿಕ್ಷಣಾಲಯದ ವ್ಯವಸ್ಥೆ ಬೇಕೆಂಬುದನ್ನು ಸರ್ಕಾರ ಗಮನಿಸಿಲ್ಲವೇ;

ಇ) ಗ್ರಾಮಾಂತರದ ಹಾಗೂ ಬಡಮಕ್ಕಳ ತಾಂತ್ರಿಕ ಶಿಕ್ಷಣಕ್ಕೆ ಅನುಕೂಲವಾಗುವಂತೆ ಬೆಳ್ತಂಗಡಿ ತಾಲ್ಲೂಕಿಗೆ ಒಂದು ಸರ್ಕಾರಿ ಪಾಲಿಟೆಕ್ನಿಕ್ ಶಿಕ್ಷಣಾಲಯವನ್ನು ಮಂಜೂರು ಮಾಡಿ ಕೂಡಲೇ ಪ್ರಾರಂಭಿಸಲು ಸರ್ಕಾರದ ಕ್ರಮಗಳೇನು;

ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳ ಪಾಲಿಟೆಕ್ನಿಕ್ ಶಿಕ್ಷಣಕ್ಕಾಗಿ ಬೇಡಿಕೆ ಇದ್ದು ಸರ್ಕಾರ ಈ ಕುರಿತು ಸಕಾಲಿಕ ಕ್ರಮಗಳನ್ನು ಜರುಗಿಸುವುದೆ?

ಉನ್ನತ ಶಿಕ್ಷಣ ಸಚಿವರು. :

ಅ) ಈ ಶೈಕ್ಷಣಿಕ ಸಾಲಿನಲ್ಲಿ ಹೊಸ ಸರ್ಕಾರಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಆ) ಗಮನಿಸಲಾಗಿದೆ.

ಇ) ಆಯವ್ಯಯದಲ್ಲಿನ ಹಣದ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವುದು.

ಈ) ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಸರ್ಕಾರಿ ಪಾಲಿಟೆಕ್ನಿಕ್‌ಗಳು ಮತ್ತು 3 ಖಾಸಗಿ ಪಾಲಿಟೆಕ್ನಿಕ್‌ಗಳಿವೆ. ಅಂತೆಯೇ, ಉಡುಪಿ ಜಿಲ್ಲೆಯಲ್ಲಿ 1 ಅನುದಾನಿತ ಪಾಲಿಟೆಕ್ನಿಕ್ ಮತ್ತು 3 ಖಾಸಗಿ ಪಾಲಿಟೆಕ್ನಿಕ್‌ಗಳು ಇವೆ. ಬೇಡಿಕೆಗೆ ಅನುಗುಣವಾಗಿ ಪಾಲಿಟೆಕ್ನಿಕ್ ಪ್ರಾರಂಭಿಸುವ ಬಗ್ಗೆ ಪರಿಶೀಲಿಸಲಾಗುವುದು.

5059 (5969) ಶ್ರೀ ಕೆ. ರಘುಪತಿ ಭಟ್ (ಉಡುಪಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿ ಈ ವರ್ಷದಿಂದ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿಗೆ) ಪರೀಕ್ಷಾ ಪದ್ಧತಿಯನ್ನು ಬದಲಾಯಿಸಲಾಗುವುದೇ ; ಹೊಸ ಪದ್ಧತಿಯ ವಿವರಗಳೇನು ;

ಆ) ಈಗ ಜಾರಿಯಲ್ಲಿರುವಂತೆ ತ್ರೈಮಾಸಿಕ ಪದ್ಧತಿಯಿಂದ ಶಿಕ್ಷಣದ ಗುಣಮಟ್ಟ ತಗ್ಗುವುದಿಲ್ಲವೇ:

ಇ) ಉಡುಪಿ ಜಿಲ್ಲೆ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ರಾಜ್ಯದಲ್ಲಿ ಪ್ರಥಮ ಸ್ಥಾನ ಪಡೆದದ್ದಕ್ಕೆ ಶಿಕ್ಷಣ ಇಲಾಖೆಗೆ ಕೊಡುಗೆ ಪುರಸ್ಕಾರ ಕೊಡಲಾಗುವುದೆ ;

ಈ) ಉಡುಪಿ ಜಿಲ್ಲೆಯಲ್ಲಿ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಹುದ್ದೆ ಖಾಲಿ ಇರುವುದನ್ನು ಸರ್ಕಾರ ಗಮನಿಸಿದೆಯೇ: ಕಳೆದ ಅಧಿವೇಶನದಲ್ಲಿ ಈ ಹುದ್ದೆ ತುಂಬಲು ಭರವಸೆ ಕೊಟ್ಟಿರುವುದು ನಿಜವೇ: ಹಾಗಿದ್ದಲ್ಲಿ ಈ ಹುದ್ದೆಯನ್ನು ಭರ್ತಿ ಮಾಡದೇ ಇರಲು ಕಾರಣವೇನು ; ವಿವರ ನೀಡುವುದು?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. :

ಅ) ಹೌದು. ಬದಲಾಯಿಸಲಾಗುವುದು. ವಿವರಣೆ ಈ ಕೆಳಕಂಡಂತಿದೆ: 2006 ರ ಮಾರ್ಚ್‌ನಿಂದ ಎಸ್.ಎಸ್.ಎಲ್.ಸಿ. (ಹತ್ತನೇ ತರಗತಿ ಪರೀಕ್ಷಾ ಪದ್ಧತಿಯನ್ನು ಬದಲಾಯಿಸಲಾಗುವುದು. ಅದರಂತೆ ಪ್ರತಿ ಪ್ರಶ್ನೆ ಪತ್ರಿಕೆ ಎರಡು ಭಾಗ ಹೊಂದಿದ್ದು, ಒಂದನೇ ಭಾಗದಲ್ಲಿ ಬಹು ಆಯ್ಕೆ ಪ್ರಶ್ನೆಗಳನ್ನು ಅಳವಡಿಲಾಗಿದೆ. ಎರಡನೇ ಭಾಗದಲ್ಲಿ ಈ ಕೆಳಕಂಡ ವಿವರಗಳಂತೆ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

1.	ಪ್ರಥಮ ಭಾಷೆ	ಎ ವಿಭಾಗ ಬಿ ವಿಭಾಗ	60 ಅಂಕಗಳು 65 ಅಂಕಗಳು ಬಿ ವಿಭಾಗದಲ್ಲಿ 26 ಅಂಕಗಳಿಗೆ 2 ಅಂಕಗಳ 13 ಪ್ರಶ್ನೆಗಳನ್ನು ಕೇಳಲಾಗುತ್ತದೆ. 39 ಅಂಕಗಳಿಗೆ 3 ರಿಂದ 5 ಅಂಕಗಳ ಪ್ರಶ್ನೆಗಳಿರುತ್ತವೆ.
2.	ಎರಡು ಮತ್ತು ಮೂರನೇ ಭಾಷೆ	ಎ ವಿಭಾಗ	50 ಅಂಕಗಳು ಬಿ ವಿಭಾಗದಲ್ಲಿ 50 ಅಂಕಗಳಲ್ಲಿ 24 ಅಂಕಗಳ 2ಪ್ರಶ್ನೆಗಳಿಗೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. 26 ಅಂಕಗಳಿಗೆ 3 ರಿಂದ 5 ಅಂಕಗಳು ನಿಗದಿಯಾಗಿರುತ್ತದೆ.
3.	ಕೋರ್ ವಿಷಯಗಳು	ಎ ವಿಭಾಗ	60 ಅಂಕಗಳು ಬಿ ವಿಭಾಗದಲ್ಲಿ 20 ಅಂಕಗಳಿಗೆ 2 ಅಂಕಗಳ 10 ಪ್ರಶ್ನೆಗಳಿರುತ್ತವೆ ಉಳಿದ 20 ಅಂಕಗಳಿಗೆ 3 ರಿಂದ 5 ಅಂಕಗಳೊಳಗೆ ಪ್ರಶ್ನೆಗಳಿರುತ್ತವೆ.